ಆ) ಚಿತ್ರದುರ್ಗ ಜಿಲ್ಲೆ ... ೨೧೭ ಕುಟುಂಬಗಳು
ಮೊಳಕಾಲ್ಮೂರು ತಾಲೂಕು ... ೭ ಕುಟುಂಬಗಳು

ಇ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ
ಚಿತ್ರದುರ್ಗ ಜಿಲ್ಲೆ ೧೧೬ ಕುಟುಂಬಗಳು
ಮೊಳಕಾಲ್ಮೂರು ತಾಲ್ಲೂಕು ೬ ಕುಟುಂಬಗಳು

ಧಾರವಾಡ ಜಿಲ್ಲೆ ಮುಂಡರಗಿ ತಾಲ್ಲೂಕಿನ ಸಿಂಗಟಾಲೂರು ಏತ ನೀರಾವರಿ ಯೋಜನೆ

೮೫೬. ಶ್ರೀ ಕೆ. ಹೆಚ್. ಕುರಡಗಿ (ಮುಂಡರಗಿ).—ಮಾನ್ಯ ಲೋಕೋಪಯೋಗಿ ಮಂತ್ರಿ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಸಿಂಗಟಾಲೂರು ಏತ ನೀರಾವರಿಯಿಂದ ನಿರೀಕ್ಷಿತ ಪ್ರಮಾಣದಷ್ಟು ಹೆಕ್ಟೇರು ಭೂಮಿಗೆ ನೀರುಣಿಸಲು ವಿಫಲವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ನೀರಾವರಿ ಮಂತ್ರಿ ಲೋಕೋಪಯೋಗಿ ಮಂತ್ರಿಗಳು).—

ಅ) ಹೌದು.

ಆ) ಈ ಯೋಜನೆಯಿಂದ ಉದ್ದೇಶಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರುಣಿಸದಿರಲು ಕಾರಣಗಳು ಕೆಳಕಂಡಂತಿವೆ.

೧ ಅಚ್ಚುಕಟ್ಟುದಾರರು ತಮ್ಮ ಜಮೀನನ್ನು ಸಮ ಮಾಡಿಕೊಳ್ಳದಿರುವುದು

೨ ಅಚ್ಚುಕಟ್ಟುದಾರರು ಸ್ವಂತ ಪಂಪುಗಳ ಮೂಲಕ ನದಿಯಿಂದ ನೀರೆತ್ತಿ ನೀರಾವರಿ ಮಾಡಿಕೊಳ್ಳುತ್ತಿರುವುದು.

೩ ಪಂಪುಗಳನ್ನು ಸ್ಥಾಪಿಸಿ ಬಹಳ ವರ್ಷಗಳಾಗಿರುವುದರಿಂದ ಅವುಗಳ ನೀರೆತ್ತುವ ಸಾಮರ್ಥ್ಯ ಕಡಿಮೆಯಾಗಿರುವುದು.

೪ ಕಾಲುವೆಗಳಿಗೆ ಲೈನಿಂಗ್ ಮಾಡದಿರುವುದರಿಂದ ನೀರಿನ ಸೋರುವಿಕೆ ಜಾಸ್ತಿಯಾಗಿ ಕಾಲುವೆಗಳ ಸಾಮರ್ಥ್ಯ ಕಡಿಮೆಯಾಗಿರುವುದು

೫ ವಿದ್ಯುತ್ ಸರಬರಾಜಿನಲ್ಲಿ ಉಂಟಾಗುವ ಕಡಿತ ಮತ್ತು ವಿದ್ಯುತ್ ಇದ್ದರೂ ಬೇಕಾದ ವೋಲ್ಟೇಜ್ ಇಲ್ಲದಿರುವುದು

ಡಂಬಳ ಬಸ್‌ಸ್ಟ್ಯಾಂಡ್ ನಿರ್ಮಾಣ

೮೫೭. ಶ್ರೀ ಕೆ. ಹೆಚ್. ಕುರಡಗಿ (ಮುಂಡರಗಿ).—ಮಾನ್ಯ ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಡಂಬಳದಲ್ಲಿ ಬಸ್ ಸ್ಟ್ಯಾಂಡ್ ಬಗ್ಗೆ ಕಟ್ಟುವ ಬಗ್ಗೆ ಸರ್ಕಾರದವರ ನಿಲುವು ಏನು ?

ಆ) ೧೯೮೫-೮೯ರ ಆಯವ್ಯಯದಲ್ಲಿ ನಮೂದಾಗಿದ್ದರೂ ಇವರೆವಿಗೂ ಕಾರ್ಯಗತವಾಗದಿರಲು ಕಾರಣವೇನು ?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ರಾಜ್ಯ ಸಚಿವರು).—

ಅ) ಈ ಕಾರ್ಯವು ೧೯೮೫-೮೯ರಲ್ಲಿಯೇ ಪ್ರಾರಂಭವಾಗಬೇಕಾಗಿದ್ದು, ಆರ್ಥಿಕ ಮುಗ್ಗಟ್ಟಿನಿಂದಾಗಿ ಪ್ರಾರಂಭಿಸಲಾಗಿರುವುದಿಲ್ಲ. ಸಂಸ್ಥೆಯ ಆರ್ಥಿಕ ಸ್ಥಿತಿ ಸುಧಾರಿಸಿದ ನಂತರ ಇದನ್ನು ಪರಿಗಣಿಸಲಾಗುವುದು.

ಆ) ಆರ್ಥಿಕ ಮುಗ್ಗಟ್ಟಿನಿಂದಾಗಿ